<u>ದಿನಾಂಕ ಃ 11.09.2025 ರಂದು ಪ್ರಮಾಣ ವಚನ ಬೋಧಿಸಲಾಗಿದೆ.</u>

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ ಆರ್ ವಿ ವಕೀಲರಿಂದಃ</u>**

26) ಸದರಿ ಈ ಕಡತವನ್ನು ದಿಃ 07.10.2020 ರಂದು ಬೆಳಗಿನ ಸಮಯದಲ್ಲಿ ಪಡೆದುಕೊಂಡಿದ್ದೆನು, ಖಚಿತ ಸಮಯ ಹೇಳಲಾಗುವುದಿಲ್ಲ. ಫ್ರಾಸಾ.1 ರವರು ದಿಃ 30.09.2020 ರಿಂದ ಚಿಕಿತ್ಸೆ ಯನ್ನು ಪಡೆದುಕೊಂಡಿದ್ದರು. ಎಷ್ಟು ದಿನಗಳ ಕಾಲ ಅವರು ಚಿಕಿತ್ಸೆ ಯನ್ನು ಪಡೆದುಕೊಂಡಿದ್ದರು ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ. ದಿಃ 12.10.2020 ರಂದು ಫ್ರಾಸಾ. 1 ರವರು ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದರೇ ಎಂದರೆ ಸಾಕ್ಷಿಯು ಈ ಬಗ್ಗೆ ಫ್ರಾಸಾ. 1 ರವರು ನಮ್ಮ ಬಳಿ ವರದಿ ಮಾಡಿಲ್ಲ ಎಂದು ಹೇಳುತ್ತಾರೆ. ದಿಃ 12.10.2020 ರಂದು ಫ್ರಾಸಾ.1 ರವರು ನಮ್ಮ ಬಳಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಆ ದಿನ ಅವರ ರಕ್ತವು ಯಾವ ಗುಂಪಿಗೆ ಸೇರಿದೆ ವರದಿ ನೀಡುವಂತೆ ವೈದ್ಯಾಧಿಕಾರಿಗಳಿಗೆ ಮನವಿ ನೀಡಿಲ್ಲ ಎಂದರೆ ಸರಿಯಲ್ಲ. ದಿಃ 16.10.2020 ರಂದು ಮುದ್ದೆಮಾಲು.1 ರಿಂದ 8 ವಸ್ತುಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಕಳುಹಿಸಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

27) ಫ್ರಾಸಾ.2 ರವರು ಯಾವ ಅವಧಿಯ ತನಕ ಮಂಡ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು, ಸದರಿ ಘಟನಾ ದಿನವೇ ಮಂಡ್ಯ ಆಸ್ಪತ್ರೆಯಿಂದ ಬೇರೆ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿದ್ದರೆಂದು ಗೊತ್ತಿರುತ್ತದೆ ಎಂದು ಹೇಳುತ್ತಾರೆ. ಆಸ್ಪತ್ರೆಯಿಂದ ಮಾಹಿತಿ ಬಂದಿದ್ದರಿಂದ ಫ್ರಾಸಾ. 2 ರವರು ಮಂಡ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಹೋಗಿದ್ದರೆಂದು ನನಗೆ ಗೊತ್ತಾಗಿರುತ್ತದೆ. ಬೆಂಗಳೂರಿನ ಆಸ್ಪತ್ರೆಯಿಂದ ನನ್ನ ಹಿಂದಿನ ತನಿಖಾಧಿಕಾರಿಗಳಿಗೆ ಎಂ.ಎಲ್. ಸಿ ಮಾಹಿತಿ ಬಂದಿತ್ತು.

28) ದಿಃ 23.10.2020 ಕ್ಕಿಂತ ಮೊದಲು ಸದರಿ ಆಸ್ಪತ್ರೆಗೆ ನಾವು ಭೇಟಿ ನೀಡಿಲ್ಲ. ಫ್ರಾಸಾ. 2 ರವರು ಹೇಳಿಕೆಯನ್ನು ಕೊಡುವ ಸ್ತಿತಿಯಲ್ಲಿ ಇಲ್ಲವೆಂದು ನನಗೆ ಮಾಹಿತಿ ಬಂದಿತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 3 ಮತ್ತು 8 ನೇ ಆರೋಪಿತರ ಪತ್ತೆಗೆ ಸಿಬ್ಬಂಗದಿಳನ್ನು ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಸಿಬ್ಬಂದಿಗಳು 3 ಮತ್ತು 8 ನೇ ಆರೋಪಿತರು

ಸಿಕ್ಕಿಲ್ಲವೆಂದು ವರದಿ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ 3 ಮತ್ತು 8 ನೇ ಆರೋಪಿತರು ತಮ್ಮ ಮನೆಯಲ್ಲೆ ಇದ್ದರು ಎಂದರೆ ಸರಿಯಲ್ಲ.

29) ಫ್ರಾಸಾ.6 ರವರು 26.10.2020 ಕ್ಕಿಂತ ಮೊದಲು ಪ್ರಕರಣ ದ ಬಗ್ಗೆ ವೈದ್ಯರ ಬಳಿ ಅಥವಾ ನನ್ನ ಹಿಂದಿನ ತನಿಖಾಧಿಕಾರಿಗಳ ಬಳಿ ಹೇಳಿಕೆಯನ್ನು ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಫ್ರಾಸಾ.6 ರವರು ದಿಃ 26.10.2020 ರಂದು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

30) ಆಷ್ಟ ಆಸ್ಪತ್ರೆಯಿಂದ ವೈದ್ಯಕೀಯ ದಾಖಲಾತಿಗಳನ್ನು ಪಡೆಯುವ ಸಮಯದಲ್ಲಿ ಫ್ರಾಸಾ.2 ರವರು ಎಲ್ಲಿದ್ದರೆಂದು ನಿಖರವಾಗಿ ನನಗೆ ಗೊತ್ತಿಲ್ಲ. ನಿಪಿ.53 ರಿಂದ 62 ದಾಖಲಾತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

31) ಮೂಲ ದಾವೆ ನಂಃ 165/2003 ದಾವೆಯು, ಪಿರ್ಯಾದಿ ಪರವಾಗಿ ಆಗಿರುತ್ತದೆ. ನಾನು ಸಿವಿಲ್ ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೇ ನಾನು ಪ್ರಕರಣಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಂಡ್ಯ ಜಿಲ್ಲಾ ಆಸ್ಪತ್ರೆ ಯಿಂದ ಒತ್ತಾಯ ಪಡಿಸಿ, ಫ್ರಾಸಾ.1 ಮತ್ತು 2 ರವರ ಎ ಆರ್ ರಿಜಿಸ್ಟರ್ extract ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಫ್ರಾಸಾ.2 ರವರು ನಿಮಾನ್ಸ್ ಆಸ್ಪತ್ರೆಯಲ್ಲಿ ದಾಖಲಾದ ಅವಧಿಯ ಬಗ್ಗೆ ನನಗೆ ಖಚಿತವಾಗಿ ಗೊತ್ತಿಲ್ಲ. ನಿಮಾನ್ಸ್ ಆಸ್ಪತ್ರೆಯ ದಾಖಾಲಾತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

32) 3 ಮತ್ತು 8 ನೇ ಆರೋಪಿತರನ್ನು ಪತ್ತೆ ಮಾಡಲು ಎಎಸ್ಐ ನಿಂಗರಾಜು ರವರನ್ನು ನೇಮಕ ಮಾಡಿದ್ದೆನು ಹಾಗೂ ಅವರು ಸದರಿ ಆರೋಪಿತರು ಪತ್ತೆ ಆಗಿಲ್ಲವೆಂದು ವರದಿ ನೀಡಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 3 ಮತ್ತು 8 ನೇ ಆರೋಪಿತರು, ತಮ್ಮ ಮನೆಯಲ್ಲೇ ಇದ್ದರು ಎಂದರೆ ಸರಿಯಲ್ಲ. ನಾನೇ ಮುಂದೆ ನಿಂತು ನಿಪಿ.34 ಮತ್ತು 35 ನ್ನು ಗಾಯದ ಪ್ರಮಾಣ ಪತ್ರಗಳನ್ನು ಸೃಷ್ಟಿಸಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

33) ನಾನು ಎಫ್.ಎಸ್.ಎಲ್. ಗೆ ಕಳುಹಿಸಿದ ವಸ್ತುಗಳು ಸೀಲ್ ಆಗಿದ್ದವು. ಆಯುಧಗಳನ್ನು ವೈದ್ಯಕೀಯ ಅಭಿಪ್ರಾಯಕ್ಕೆ ವೈದ್ಯರಿಗೆ ಕಳುಹಿಸಿದ್ದೆವು, ವೈದ್ಯಕೀಯ ಅಭಿಪ್ರಾಯವನ್ನು ಪಡೆದಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದ ಪ್ರಮಾಣ ಪತ್ರದಲ್ಲಿ ಯಾವ ಕ್ಯಾಮಾರಾದಿಂದ ಫೋಟೋಗಳನ್ನು ತೆಗೆಯಲಾಗಿದೆ ಎಂದು ನಮೂದು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಠಾಣೆಯ ಕ್ಯಾಮಾರದಿಂದ ಫೋಟೋಗಳನ್ನು ತೆಗೆದಿದ್ದೇವೆ ಎಂದು ನಮೂದು ಮಾಡಿದ್ದೇವೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯನ್ನು ಪತ್ತೆ ಮಾಡಿ ನನ್ನ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಿಃ 11.12.2020 ರಂದು ಈ ಪ್ರಕರಣದಲ್ಲಿ ತನಿಖೆ ಮುಕ್ತಾಯಗೊಂಡಿತ್ತು. ಫ್ರಾಸಾ.20 ರವರ ಸುಳ್ಳು ತನಿಖೆಯ ಆಧಾರದ ಮೇರೆಗೆ, ನಾನು ಯಾವುದೇ ತನಿಖೆಯನ್ನು ನಡೆಸದೇ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.